4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿಸಿ ನಂ- 11797/2004 **ಚಾ.ಸಾ.-** 33 **ಅ.ಸಾ.-** 4

ಪ್ರ.ವ.ಬೊ. ದಿಃ 10.04.2018

ಸಾಕ್ಷಿದಾರನ ಹೆಸರು : ಎಸ್.ಎಂ.ಅಂದಾನಿಗೌಡರ್

ತಂದೆಯ ಹೆಸರು : ಮುದಿಗೌಡ

ವಯಸ್ಸು : 65 ವರ್ಷ

ಕೆಲಸ : ನಿವೃತ್ತ ಸರ್ಕಾರಿ ನೌಕರ

ವಾಸ : ಹುಬ್ಬಳ್ಳಿ

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ನಾನು ಹುಬ್ಬಳ್ಳಿಯ ಎಪಿಎಂಸಿ ಯಾರ್ಡ್‌ನಲ್ಲಿ 1999 ರಿಂದ 2004 ವರೆಗೆ ಸಹಾಯಕ ಕಾರ್ಯದರ್ಶಿ ಆಗಿ ಕಾರ್ಯನಿರ್ವಹಿಸುತ್ತಿದ್ದೆ. ಈ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಮ್ಮ ವಕೀಲರಾದ ತಿಮ್ಮೇಗೌಡರು ರಾಜೋಟೇಶ್ವರ ಕಂಪನಿಯ ರಶೀದಿ ಮತ್ತು ಸಾಗಾಣಿಕೆ ಪರ್ಮಿಟ್ ನನ್ನ ಸಹಿ ಇರುವ ಪುಸ್ತಕ ನೀಡಿದ್ದೀರಾ ಎಂದು ಮಾಹಿತಿ ಕೇಳಿದರು. ಕೆಎ-04-ಬಿ-2525 ಮತ್ತು ಕೆಎ-04-4539 ಲಾರಿಗಳು ಗೋಧಿ ತುಂಬಿಕೊಂಡು ಎಪಿಎಂಸಿ ಯಾರ್ಡ್‌ನಿಂದ ಹೊರಗಡೆ ಹೋಗಿದೆಯಾ ಎಂದು ಕೇಳಿದರು. ಅದರಂತೆ ನಾವು ಪರಿಶೀಲಿಸಲಾಗಿ ರಾಚೋಟೇಶ್ವರ ಟ್ರೇಡರ್ಸ್‌ಗೆ 164 ನೇ ಸಾಗಾಣಿಕೆ ಪರ್ಮಿಟ್ ನೀಡಿರುವುದು ಸರಿ ಇರುತ್ತದೆ ಆದರೆ ರಾಚೋಟೇಶ್ವರ ಟ್ರೇಡರ್ ಮಾಲೀಕರಾದ ಶ್ರೀ ಮಂಜುನಾಥ್ ಅರಳೀಪುರ್ ಅವರನ್ನು ಕರೆಸಿ ಕೇಳಲಾಗಿ ನಾನು ಬೆಂಗಳೂರಿನಲ್ಲಿರುವ ಒಬ್ಬ ಮಂಜು ಎನ್ನುವವರಿಗೆ ಕೊಟ್ಟಿದ್ದೇನೆ ಎಂದು ಹೇಳಿ ತಿಳಿಸಿದಾಗ ನಾವು ಅದು ತಪ್ಪು ಅದನ್ನು ವಾಪಸ್ಸು ಕೊಡಿ ಎಂದು ನೋಟೀಸ್ ಜಾರಿ ಮಾಡಿದ್ದೇವೆ. ಆದರೆ ನಾವು ಎಪಿಎಂಸಿ ಯಾರ್ಡ್‌ನಿಂದ ಗೋಧಿ ಸಾಗಾಣಿಕೆ ಮಾಡಿಲ್ಲ ಎಂದು ನಮಗೆ ಟ್ರೇಡರ್ಸ್ ತಿಳಿಸಿದ್ದಾರೆ. ಈ ಮೇಲೆ ಹೇಳಿದ ಲಾರಿಗಳನ್ನು ಎಪಿಎಂಸಿ ಯಾರ್ಡ್‌ನಲ್ಲಿ ಸಾಗಾಣಿಕೆ ಆಗಿದೆಯೇ ಇಲ್ಲವೇ ಎನ್ನುವ ಬಗ್ಗೆ ಚೆಕ್‌ಪೋಸ್ಟ್‌ನಲ್ಲಿ ಪರಿಶೀಲಿಸಲಾಗಿ ಯಾವುದು ಹೋಗಿರುವುದು ಕಂಡುಬಂದಿಲ್ಲ.

ಮುಂದುವರೆದು ನಾವು ಸಾಗಾಣಿಕೆ ಪರ್ಮಿಟ್ ಕೊಡುವಾಗ triplicate leaf ಗಳನ್ನು ಕೊಡಲಾಗುವುದು. ಅದರಲ್ಲಿ ಸಾಗಾಣಿಕೆ ಮಾಡುವಾಗ ಎಪಿಎಂಸಿ ಚೆಕ್‌ಪೋಸ್ಟ್‌ಗೆ ಒಂದು, ಎರಡನೆಯದು ಶುಲ್ಕ ಕಟ್ಟುವಾಗ ಎಪಿಎಂಸಿ ಆಫೀಸ್‌ಗೆ ಹಾಗೂ ಮೂರನೆಯದ್ದನ್ನು ಅವರ ಬಳಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಎಪಿಎಂಸಿ ಯಾರ್ಡ್‌ನಿಂದ ಗೋಧಿ ಹೋಗಿರುವುದು ಕಂಡುಬಂದಿಲ್ಲ. ಈ ಬಗ್ಗೆ ಪ್ರಾ.ಸಾ.3 ರವರು ಆ ಬಗ್ಗೆ ಪರಿಶೀಲಿಸಿ ಮಾಹಿತಿ ನೀಡಲು ಕೋರಿರುತ್ತಾರೆ. ನಾನು ಪರಿಶೀಲಿಸಿ ಸದರಿ ಗೋಧಿ ತುಂಬಿದ ವಾಹನಗಳು ನಮ್ಮ ಯಾರ್ಡ್ ಚೆಕ್‌ಪೋಸ್ಟ್‌ನಿಂದ ಪಾಸ್ ಆಗಿರುವುದಿಲ್ಲ ಎಂದು ಮಾಹಿತಿ ನೀಡಿರುತ್ತೇನೆ. ಈ ಬಗ್ಗೆ ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

ಪಾಟೀ ಸವಾಲುಃ 3ನೇ ಆರೋಪಿ ಪರ ಶ್ರೀ ಎಸ್.ಎನ್.ಪಿ ವಕೀಲರಿಂದಃ

ದಿಃ 01.08.2003 ರಂದು ಭಾರತ ಸರ್ಕಾರದಿಂದ ನಮ್ಮ ಎಪಿಎಂಸಿಗೆ ಗೋಧಿ ಸರಬರಾಜು ಆಗಿಲ್ಲ ಎಂದರೆ ಸರಿ. ಆ ರೀತಿ ಗೊಧಿ ಸರಬರಾಜು ಆಗದ ಕಾರಣ ಆರೋಪಿತರು ಯಾವುದೇ ಅಪರಾಧ ಮಾಡಿಲ್ಲ ಎಂದರೆ ಸರಿಯಲ್ಲ. ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಓ

(ರೂಪ ಆರ್ ಕುಲಕರ್ಣಿ)
4ನೇ ಅ ಮು ಮ ದಂ, ಬೆಂಗಳೂರು